ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜಕೀಯ ಪಕ್ಷದಲ್ಲಿರುವವರು ತಮ್ಮ ಪಕ್ಷದ ತತ್ವಕ್ಕೆ ಒಳಪಟ್ಟು ನಡೆದುಕೊಳ್ಳದಿದ್ದರೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆನ್ನುವ ಸ್ವಾಭಾವಿಕ ಪದ್ಧತಿಯಿದೆ.

ಶ್ರೀ ಎಚ್. ಎಸ. ಸಿದ್ದಪ್ಪ.—ಈಗಿನ ಭೂ ಸುಧಾರಣಾ ಕಾನೂನಿನ ವಿಚಾರದಲ್ಲಿ ಭಿನ್ನಾಭಿಪ್ರಾಯ ಆ ಪಕ್ಷದಲ್ಲಲ್ಲಿಯೂ ಇದೆ, ಈ ಪಕ್ಷದಲ್ಲಿಯೂ ಇದೆ ಎಂದು ತಾವು ಹೇಳಿದಿರಿ. ತಮ್ಮ ಪಕ್ಷದಲ್ಲಿ ಆ ಭಿನ್ನಾಭಿಪ್ರಾಯ ಯಾವ ಮಟ್ಟದಲ್ಲಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಅಳತೆ ಮಾಡಿ ಹೇಳುವುದಕ್ಕೆ ಈಗ ಸಮಯವಿಲ್ಲ. ಭಿನ್ನಾಭಿಪ್ರಾಯ ನಮ್ಮ ಪಕ್ಷದಲ್ಲಿ ಯಾವ ಮಟ್ಟದಲ್ಲಿದೆ ಎಂಬುದನ್ನು ನಮ್ಮ ಪಕ್ಷದ ಸಭೆಯಲ್ಲಿ ಅಳತೆ ಮಾಡಿ ನೋಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಭಿನ್ನಾಭಿಪ್ರಾಯ ಇರುವುದು ಸಹಜ ಎಂಬುದನ್ನು ಒಪ್ಪಿಕೊಂಡರೂ ಸಹ ಭಾರಿ ಜಮೀನುದಾರರು ಸೇರಿಕೊಂಡು ಈಗಿನ ಸೀಲಿಂಗ್ ಮಿತಿಯನ್ನು ಜಾರಿಗೆ ತರುವುದಕ್ಕೆ ಅವಕಾಶ ಕೊಡದೆ ರೈತ ವರ್ಗಕ್ಕೆ ಪರಿಹಾರ ಸಿಕ್ಕದ ಹಾಗೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಅದನ್ನು ತೊಡೆದುಹಾಕುವುದಕ್ಕೆ ಈ ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆ ಮುಗಿಯುವುದರೊಳಗೆ ಪಾಸ್ ಮಾಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಭೂ ಸುಧಾರಣಾ ಮಸೂದೆಯನ್ನು ಸಭೆಯು ಮುಂದೆ ಮಂಡಿಸಲಾಗಿದೆ. ಅದರ ಮೇಲೆ ಈಗಾಗಲೇ ಇಬ್ಬರು ಮೂವರು ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ. ಈ ಅಧಿವೇಶನದಲ್ಲಿಯೇ ಅದು ಬರುತ್ತದೆ ಮತ್ತು ಅದರ ಬಗ್ಗೆ ಮಾನ್ಯ ಸಭೆ ತೀರ್ಮಾನ ಮಾಡಿದ ಮೇಲೆ ಅದು ಜಾರಿಗೆ ಬರುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಭೂ ಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಕಾಂಗ್ರೆಸ್ ಪಕ್ಷದವರು ತಮ್ಮ ಚುನಾವಣಾ ಪ್ರಚಾರದ ಮ್ಯಾನಿಫೆಸ್ಟೋದಲ್ಲಿ ಸೇರಿಸಿದಂತಹ ಒಂದು ನೀತಿಯಾಗಿರಲಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕಾಗಿಯೇ ಭೂಸುಧಾರಣಾ ಮಸೂದೆಯನ್ನು ಈ ಸಭೆಯಲ್ಲಿ ಮಂಡಿಸಿರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಷಯದಲ್ಲಿ ಪತ್ರಿಕೋದ್ಯಮಿಗಳು ಮುಖ್ಯಮಂತ್ರಿಗಳ ಗಮನವನ್ನು ಸೆಳೆದಾಗ, ಆ ರೀತಿ ಎಲ್ಲರೂ ಬದಲಾವಣೆ ಮಾಡಬೇಕೆನ್ನುವ ಅಭಿಪ್ರಾಯ ಪಟ್ಟರೆ, ತಿದ್ದುಪಡಿ ಮಾಡುವುದಕ್ಕೆ ತಯಾರಾಗಿದ್ದೇವೆಂದು ಮುಖ್ಯಮಂತ್ರಿಗಳು ಹೇಳಿರುವುದರಿಂದ, ಈ ಭೂಸುಧಾರಣಾ ಮಸೂದೆಯನ್ನು ಪ್ರತಿಗಾಮಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ತಯಾರಾಗಿದ್ದಾರೆಂಬುದು ನಿಜವಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಮಾನ್ಯ ಸಭೆಯು ಅಂತ್ಯ ತೀರ್ಮಾನ ತೆಗೆದು ಕೊಂಡಾಗ, ಬೇರೆಯವರು ಕೊಟ್ಟ ಯಾವ ಹೇಳಿಕೆಗಳೂ ಜಾರಿಗೆ ಬಂದಂತಾಗುವುದಿಲ್ಲ. ಈ ಮಾನ್ಯ ಸಭೆಯ ತೀರ್ಮಾನವೇ ಅಂತ್ಯ ತೀರ್ಮಾನವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳಿರುವುದು ಸ್ಪಷ್ಟವಾಗಿದೆ. ಭೂ ಮಾಲೀಕರು ಒತ್ತಡ ಮಾಡಿದರೆ ಅದಕ್ಕೋಸ್ಕರ ತಿದ್ದುಪಡಿ ಮಾಡೋಣ ಎಂದು ನಾನು ಹೇಳಿಲ್ಲ. ನಾನು ಹೇಳಿರತಕ್ಕಂಥದ್ದು ಪಕ್ಷ ಈ ಸಭೆಯಲ್ಲಿ ಕುಳಿತಾಗ ಯಾವ ತೀರ್ಮಾನವಾಗುತ್ತದೋ ಅದು ಜಾರಿಗೆ ಬರುತ್ತದೆ ಎಂದು.

COLLEGE OF ARTS, SCIENCE OR COMMERCE IN CIVIL AREA OF BANGALORE.

319. Sri K. R. SRINIVASALU NAYUDU (Shanthinagar).—

Will the Minister for Education be pleased to state :—

(*a*) whether it has cime to the notice of Government that there is no First Grade College either of Arts or Science or Commerce in the Civil Area of Bangalore ; if so, the reason for the same ;

(SRI K. R. SRINIVASALU NAYUDU)

(*b*) whether there is any proposal before Government to start Government College in the said area ;

(*c*) if not, the difficulty experienced by Government in the matter ?

Sri A. R. BADARINARAYANA (Minister for Education).—

(*a*) There are three First Grade Colleges in the Civil Area of Bangalore.

(*b*) No.

(*c*) Does not arise in view of reply to clause (*b*) of the question.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸಿವಿಲ್ ಪ್ರದೇಶಗಳಲ್ಲಿ ಮೂರು ಪ್ರಥಮ ದರ್ಜೆಯ ಕಾಲೇಜುಗಳು ಇವೆ ಎಂದು ಹೇಳಿದ್ದೀರಿ. ಅವುಗಳು ಯಾವುವು ಎಂಬುದನ್ನು ಹೇಳುತ್ತೀರಾ ?

† Sri A. R. BADARINARAYANA.—St. Josephs Arts and Science College, St. Josephs Commerce College, Jyithi Nivas College and Mt. Carmael College.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಈ ಮೂರ ಕಾಲೇಜುಗಳು ಖಾಸಗೀ ಕಾಲೇಜುಗಳಾಗಿದ್ದು ಫೀ ಜಾಸ್ತಿ ವಸೂಲಿ ಮಾಡುತ್ತಿರುವುದರಿಂದ ಬಡವರ ಮಕ್ಕಳು ಓದುವುದಕ್ಕೆ ತೊಂದರೆಯಾಗಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಬಡವರ ಮಕ್ಕಳಿಗೆ ಸರ್ಕಾರೀ ಕಾಲೇಜು ಆಗಬೇಕು ಎಂಬ ತತ್ವವನ್ನು ಒಪ್ಪುತ್ತೇನೆ. ಆದರೆ ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನು ಸ್ವಲ್ಪ ನೋಡಿ ಅವಕಾಶವಿದ್ದರೆ ಅದನ್ನು ಮಾಡುವುದಕ್ಕೆ ಪ್ರಯತ್ನಮಾಡೋಣ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಸಿವಿಲ್ ಪ್ರದೇಶದಲ್ಲಿ ಇಡೀ ಬೆಂಗಳೂರು ನಗರ ಜನ ಸಂಖ್ಯೆಯ ಮೂರನೇ ಒಂದು ಭಾಗದಷ್ಟು ಜನರು ವಾಸ ಮಾಡುತ್ತಿದ್ದಾರೆ. ಈ ಕಾರಣದಿಂದ ಆ ಭಾಗದಲ್ಲಿ ಸರ್ಕಾರೀ ಕಾಲೇಜು ಇಲ್ಲದೆ ತೊಂದರೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ? ಬಂದಿದ್ದರೆ ಅಲ್ಲಿ ಸರ್ಕಾರೀ ಕಾಲೇಜನ್ನು ಪ್ರಾರಂಭ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಎ. ಆರ್. ಬದರೀನಾರಾಯಣ.—ಸಿಟಿ ಏರಿಯಾದಲ್ಲಿ ಸರ್ಕಾರಿ ಕಾಲೇಜುಗಳು ಬೇಕಾದಷ್ಟು ಇವೆ. ಸಿವಿಲ್ ಏರಿಯಾದಿಂದ ಗಂಡುಮಕ್ಕಳು ಬೈಸ್ಕಲ್ ಮೇಲೆ ಸಿಟಿ ಏರಿಯಾದಲ್ಲರುವ ಸರ್ಕಾರಿ ಕಾಲೇಜುಗಳಿಗೆ ಬರುತ್ತಿದ್ದಾರೆ. ಸಿವಿಲ್ ಏರಿಯಾದಲ್ಲಿ ಸರ್ಕಾರೀ ಕಾಲೇಜು ಆಗಬೇಕಾಗಿದೆ. ಆದರೆ ಆ ಬಗ್ಗೆ ಒತ್ತಾಯ ಬಂದಿಲ್ಲ. ಈಗ ತಾವು ಹೇಳಿರುವುದರಿಂದ ಅದನ್ನು ಕನ್ಸಿಡರ್ ಮಾಡೋಣ.

Sri D. POOSALINGAM.—The Chief Minister has visited the Civil Area and participated in several functions. Almost all the political parties have given a representation to him to open a Government College in Civil Area. If that is so, what is the action taken by the Government ?

ಶ್ರೀ ಎ. ಆರ್. ಬದರೀನಾರಾಯಣ.—ಆ ರೀತಿ ರೆಪ್ರಸೆಂಟೇಷನ್ ಕೊಟ್ಟಿದ್ದರೆ ಕನ್ಸಿಡರ್ ಮಾಡಿಯೇ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್..—ಈಗ ತಾವು ಓದಿ ಹೇಳಿದ ಕಾಲೇಜುಗಳೆಲ್ಲವೂ ಕ್ರಿಶ್ಚಿಯನ್ ಮೆಷಿನರಿ ಕಾಲೇಜುಗಳು. ಅವರು ಈಗ ಎಲ್ಲಕಡೆಯೂ ಈ ರೀತಿ ಕಾಲೇಜುಗಳನ್ನು ಪ್ರಾರಂಭ ಮಾಡಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಗಳಿಸುತ್ತಿದ್ದಾರೆ. ಮತ್ತು, ಈ ಕಾಲೇಜುಗಳಲ್ಲಿ ಫೀಯನ್ನು ಜಾಸ್ತಿ ವಸೂಲು ಮಾಡುತ್ತಿದ್ದಾರೆ. ಇದರಿಂದ ಈ ಕಾಲೇಜುಗಳಲ್ಲಿ ಸಾಮಾನ್ಯ ಮತ್ತು ಮಧ್ಯಮ ವರ್ಗದವರಿಗೆ ಅದರಲ್ಲೂ ಬಡವರಿಗೆ ವಿದ್ಯಾಭ್ಯಾಸ ಸಿಗುವುದು ಕಷ್ಟವಾಗುತ್ತದೆ. ಆದ್ದರಿಂದ ಇದರ ಬಗ್ಗೆ ತುರ್ತು ಕ್ರಮ ತೆಗೆದುಕೊಂಡು ಸಿವಿಲ್ ಏರಿಯಾದಲ್ಲಿ ಸರ್ಕಾರೀ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನಮಾಡುತ್ತೀರಾ ?

Sri A. R. BADARINARAYANA.—The Hon'ble Member has made out a good case for starting a Government College. But as I have already said, the question depends upon the financial resources of the State. Also it is our primary responsibility to see that free and compulsory primary education is imparted. That is more important. After that, this will be considered.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈ ಭಾಗದಲ್ಲಿ ಸರ್ಕಾರಿ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಏನೇನು ಅನುಕೂಲಗಳು ಬೇಕಾಗಿದೆ ?

ಶ್ರೀ ಎ. ಆರ್. ಬದರೀನಾರಾಯಣ.—ಅನುಕೂಲಗಳನ್ನು ಕಲ್ಪಿಸಿಕೊಟ್ಟರೆ ನಾವು ನೀವು ಮಾತನಾಡಿ ಏನು ಮಾಡಬೇಕು ಎಂಬುದನ್ನು ನಿರ್ಣಯ ಮಾಡಬಹುದು.

NON-AVAILABILITY OF ACTS AT GOVERNMENT CENTRAL BOOK DEPOT

321. Sri J. S. Ammannavar (Sadalga).— —

Will the Minister for Education be pleased to state :—

(a) whether it has come to the notice of the Government, the non-availability of the copies of Rules framed under the Village Panchayat and Local Boards Act in the Sales Section of the Central Book Depot, Bangalore ;

(b) if so, since when they are not available ;

(c) whether there is any proposal to make them available in the form of book-lets immediately ;

(d) the other Acts which were not available for sale in the Sales Depot ?

Sri A. R. BADARINARAYANA (Minister for Education).—

(a) No.

(b) Does not arise.

(c) Yes.

(d) (1) Municipalities Acts (Revised).

(d) (2) Village Panchayats and Local Boards Act (Kannada)